# ಮಾದಪ್ಪ Lyrics in Kannada

ಮಾದಪ್ಪ ನುಡಿಸೌನೆ ಕೈಯಾರೆ ಢಮರುಗವ
ತಕ ತಕ ತಕ ಕುಣಿತೈತೆ ಖುಷೀಲಿ ಜಗಜೀವ

ಮಾದಪ್ಪ ನುಡಿಸೌನೆ ಕೈಯಾರೆ ಢಮರುಗವ
ತಕ ತಕ ತಕ ಕುಣಿತೈತೆ ಖುಷೀಲಿ ಜಗಜೀವ

ಕುಟ್ಟು ಭತ್ತವ ತಟ್ಟು ರೊಟ್ಟಿಯ ಕೇಳು ಎಲ್ಲೆಲ್ಲೂ ಪದವೈತೆ
ಕಟ್ಟು ಗಾಡಿಯ ಸುತ್ತು ರಾಟೆಯ ಎಲ್ಲೆಲ್ಲೂ ಕೇಳು ಪದವೈತೆ

ಮಾದಪ್ಪ ನುಡಿಸೌನೆ ಕೈಯಾರೆ ಢಮರುಗವ
ತಕ ತಕ ತಕ ಕುಣಿತೈತೆ ಖುಷೀಲಿ ಜಗಜೀವ

ಓರಿಕೊರಳಿನ ಗಂಟೆ ಶಬ್ದವು ಗೋಧೂಳಿ ಸಂಜೆಗೆ ಪದ
ಹಸುಗೂಸಿನ ಗೆಜ್ಜೆ ಸಪ್ಪಳ ಹಡೆದವ್ವೆಗೆ ನಿತ್ಯದಾ ಪದ

ಹೊತ್ತೂಡ್ತು ಅನ್ನೊ ಕೋಳಿ ಕೂಗು ಹಳ್ಳಿಯ ಕಾಯ ಪದವು
ಅಂಬಾ ಹಸಿವಾತು ಅನ್ನೊ ಕರುವ ಕೂಗಲಿ ಬೆಳಕ ಪದವು

ರುಚಿಯದು ಅನ್ನದ ಪದವೊ
ಅನ್ನವು ಬೆವರಿನ ಪದವೊ
ಬೆವರದು ದುಡಿಮೆಯ ಪದವೊ

Bharatlyrics.com
ದುಡಿಮೆಯು ಭಕುತಿ ಪದವೊ

ಭೂತಾಯಿ ಜೋಗುಳ ಜಗಕ್ಕೆ ಸರಿಗಮಪ
ಮಗುವಂತ ಮನಸ್ಸಿಗೆ ಎಲ್ಲೆಲ್ಲೂ ಸನಿದಮಮ
ಮಾದಪ್ಪ ನುಡಿಸೌನೆ ಕೈಯಾರೆ ಢಮರುಗವ
ತಕ ತಕ ತಕ ಕುಣಿತೈತೆ ಖುಷೀಲಿ ಜಗಜೀವ

ಗೋಡೆಯ ಕೆಡವಿ ಸೇತುವೆ ಕಟ್ಟುವ ಪದವೊಂದ
ಮಾದಪ್ಪನೆ ಎಸೆಯೊ ಭೂಮಿಗೆ ಬೆಳಗಲಿ ಸಂಬಂಧ

ನೋವಿರುವ ನಲಿವಿರುವ ಬದುಕೊಂದು ಪದದಸಂತೆ
ದಣಿದಿರುವ ಮನಗಳಿಗೆ ಪದವೊಂದು ಹೆಗಲಿನಂತೆ
ನಿಂತಲೇ ನಿಲದಿರು ಜೀವ
ಹರಿದಾಡು ಪದದಂತೆ ಪದವಾಗ್ಲಿ ಬದುಕು

ಹೂವೊಂದು ಬೇರಿನ ಪದವೊ
ಹಣ್ಣೊಂದು ಮಣ್ಣಿನ ಪದವೊ
ನಗುವದು ಒಲವಿನ ಪದವೊ
ಒಲವದು ಬದುಕಿನ ಪದವೊ

ಮಾದಪ್ಪ ನುಡಿಸೌನೆ ಕೈಯಾರೆ ಢಮರುಗವ
ತಕ ತಕ ತಕ ಕುಣಿತೈತೆ ಖುಷೀಲಿ ಜಗಜೀವ.

*More Lyrics from Orchestra Mysuru*

BHARAT lyrics